ಶ್ರೀರಾಮದೇವರ ಉತ್ತರನಾಲೆಯ ಆಧುನೀಕರಣದಿಂದಾಗಿ ಬೀಳುನೀರು ಪ್ರಸ್ತಾವಿತ ಗಾಣದಹಳ್ಳಿ ಪಿಕಪ್ ನಾಲೆಯ ಎಡದಂಡೆ ನಾಲೆ ಅಂದರೆ ಹಳೆ ಮಾದಾಪುರ ನಾಲೆಗೆ ಬೀಳುತ್ತಿದ್ದು, ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲಾಗುತ್ತಿದೆ. ಗಾಣದಹಳ್ಳಿ ಪಿಕಪ್‌ನ ಬಲದಂಡೆ ನಾಲೆಯ ಮಂದಗೆರೆ ಬಲದಂಡೆ ನಾಲೆಯ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಡಿಯಲ್ಲಿ ಬರುತ್ತಿದ್ದು, ಬೀಳುನೀರಿನಿಂದ ರೈತರ ಜಮೀನುಗಳಿಗೆ ನೀರನ್ನು ಒದಗಿಸಲಾಗುತ್ತಿದೆ.

ಏತನ್ಮಧ್ಯೆ, ಹಳೆ ಮಾದಾಪುರ ನಾಲೆಯನ್ನು ಆಧುನೀಕರಣ ಗೊಳಿಸಲು ಉದ್ದೇಶಿಸಲಾಗಿದ್ದು, ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವಿದ್ದು, ಅಂದಾಜಿಗೆ ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಉಪಸಮಿತಿಯಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಕೈಗೊಂಡು ಇನ್ನೂ ನೀರಿನ ಹರಿವನ್ನು ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಗಾಣದಹಳ್ಳಿ ಪಿಕಪ್‌ನ ಅಚ್ಚುಕಟ್ಟು ಪ್ರದೇಶವು ಮಾದಾಪುರ ನಾಲಾ ಆಧುನೀಕರಣ ಕಾಮಗಾರಿಗಳಿಂದ ನೀರಾವರಿಗೆ ಒಳಪಡುವುದರಿಂದ ಈ ಪಿಕಪ್‌ನ ನಿರ್ಮಾಣದ ಅವಶ್ಯಕತೆ ಕಂಡು ಬರುವುದಿಲ್ಲ.

ಏ) ಹಳೇ ಮಾದಾಪುರ ನಾಲೆಯ ಹೂಳು ತೆಗೆದು ನೀರನ್ನು ಹರಿಸಲಾಗುತ್ತಿದ್ದು, ಆಧುನೀಕರಣ ಕಾಮಗಾರಿಗಳನ್ನು ಕೈಗೊಂಡು 2012 ರ ಅಂತ್ಯಕ್ಕೆ ಪೂರ್ಣಗೊಳಿಸಿ ನೀರಿನ ಹರಿವನ್ನು ಉತ್ತಮ ಪಡಿಸಲಾಗುವುದು.

171 ಶ್ರೀ ಜಾರಕಿಹೊಳಿ ಸತೀಶ್ ಲಕ್ಷ್ಮಣರಾವ್ : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನಲ್ಲಿ ಬಳ್ಳಾರಿನಾಲಾ ಯೋಜನೆಯಡಿ ಮುಳುಗಡೆಯಾಗಿರುವ ಒಟ್ಟು ಕ್ಷೇತ್ರವೆಷ್ಟು;

ಆ) ಮುಳುಗಡೆಯಿಂದ ಬಾಧಿತರಾದ ಸಂತ್ರಸ್ಥ ರೈತರಿಗೆ ಇಲ್ಲಿಯವರೆಗೆ ಎಷ್ಟು ಪರಿಹಾರಧನ ಕೊಡಲಾಗಿದೆ ಹಾಗೂ ಇನ್ನೂ ಎಷ್ಟು ಸಂತ್ರಸ್ಥ ರೈತರಿಗೆ ಪರಿಹಾರಧನ ಕೊಡಬೇಕಾಗಿದೆ;

ಇ) ಮುಳುಗಡೆ ಪ್ರದೇಶದ ಗ್ರಾಮಗಳನ್ನು ಸ್ಥಳಾಂತರಗೊಳಿಸಿ, ಪುನರ್ ನಿರ್ಮಾಣ ಹಾಗೂ ಪುನರ್ ವಸತಿ ಸೌಲಭ್ಯಗಳನ್ನು ಕಲ್ಪಿಸಿ ಕೊಡುವ ಪ್ರಕ್ರಿಯೆಯು ವಿಳಂಬವಾಗಲು ಕಾರಣಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ಬಳ್ಳಾರಿನಾಲಾ ಯೋಜನೆ ಅಡಿಯಲ್ಲಿ ಮುಳುಗಡೆಯಾದ ಕ್ಷೇತ್ರದ ವಿವರ :

1) ಅರಣ್ಯ ಕ್ಷೇತ್ರ 139.77 ಹೆಕ್ಟೇರ್
2) ಕಂದಾಯ ಕ್ಷೇತ್ರ 188.24 ಹೆಕ್ಟೇರ್
ಒಟ್ಟು : 328.01 ಹೆಕ್ಟೇರ್

ಆ) ಮಂಜೂರಾದ ಅವಾರ್ಡ್ ಪ್ರಕಾರ ಮುಳುಗಡೆ ಸಂತ್ರಸ್ಥರಿಗೆ ನೀಡಲಾದ ಪರಿಹಾರಧನ ಈ ಕೆಳಗಿನಂತಿದೆ :

ಕಟ್ಟಡಗಳು : ರೂ.93.26 ಲಕ್ಷ.
ಜಮೀನುಗಳು : ರೂ. 77.63 ಲಕ್ಷ.
ಒಟ್ಟು ರೂ. 170.89 ಲಕ್ಷ.

ಕೆಲವು ಭಾಗದಲ್ಲಿ ಜಮೀನುಗಳ ಭೂಸ್ವಾಧೀನ ಹಾಗೂ ಕಟ್ಟಡಗಳ ಮೌಲ್ಯ ಮಾಪನಗಳು ಇನ್ನೂ ಅಂತಿಮಗೊಂಡಿರುವುದಿಲ್ಲ. ಸದರಿ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಮಾತ್ರ ಪರಿಹಾರ ನೀಡಬೇಕಾದ ಸಂತ್ರಸ್ಥ ರೈತರ ಸಂಖ್ಯೆಯನ್ನು ತಿಳಿಸಲು ಸಾಧ್ಯವಾಗುತ್ತದೆ.

ಇ) ಬಳ್ಳಾರಿನಾಲಾ ಯೋಜನೆಯ ಹಿನ್ನೀರಿನ ಈ ಕೆಳಕಂಡ 3 ಗ್ರಾಮಗಳು ಸಂಪೂರ್ಣವಾಗಿ ಮುಳುಗಡೆ ಆಗುತ್ತವೆ:

(1) ಸಿದ್ದನಹಳ್ಳಿ (2) ಕಬಲಾಪೂರ (3) ಮಾಸ್ತಿಹೊಳಿ ಸಿದ್ದನಹಳ್ಳಿ ಗ್ರಾಮದ ಸ್ಥಳಾಂತರಕ್ಕಾಗಿ, ತುಮ್ಮರಗುದ್ದಿ ಗ್ರಾಮದ ಸ. ನಂ. 137, 138 ರ ಭೂಸ್ವಾಧೀನಕ್ಕೆ 4 (1) ಅಧಿಸೂಚನೆ ಹೊರಡಿಸಲಾಗಿದೆ. ಪುನರ್ವಸತಿಗಾಗಿ ವಶಪಡಿಸಿಕೊಳ್ಳುವ ಕ್ಷೇತ್ರವು 44 ಎಕರೆ 31 ಗುಂಟೆ.

ಕಬಲಾಪೂರ ಗ್ರಾಮದ ಸ್ಥಳಾಂತರಕ್ಕಾಗಿ ಚಂದೂರು ಮತ್ತು ಖನಗಾಂವ ಬಿ.ಕೆ ಗಳಲ್ಲಿ 76 ಎಕರೆ 28 ಗುಂಟೆ ಕ್ಷೇತ್ರವನ್ನು ಪ್ರಸ್ತಾಪಿಸ ಲಾಗಿದ್ದು, ಜೆ.ಎಂ.ಸಿ. ಹಂತದಲ್ಲಿದೆ.

ಮಾಸ್ತಿಹೊಳಿ ಗ್ರಾಮದ ಪುನರ್ ವಸತಿಗಾಗಿ ಸದರಿ ಗ್ರಾಮದ ಸ.ನಂ 80 ಮತ್ತು 81 ರಲ್ಲಿ ಸ್ಥಳ ಗುರುತಿಸಲಾಗಿದ್ದು, ಇದರ ಹಸ್ತಾಂತರಕ್ಕಾಗಿ ಪ್ರಸ್ತಾವನೆಯನ್ನು ನಿಗಮದಿಂದ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ

ಕಳುಹಿಸಲಾಗಿದೆ. ವಿವರಿಸಲಾಗಿರುವಂತೆ ಪ್ರಕ್ರಿಯೆಗಳು ವಿವಿಧ ಹಂತಗಳಲ್ಲಿ ಜಾರಿಯಲ್ಲಿದ್ದು, ಪ್ರಗತಿಯಲ್ಲಿರುತ್ತವೆ.

27 ಶ್ರೀ ವಸಂತಬಂಗೇರ. ಕೆ (ಬೆಳ್ತಂಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಎಷ್ಟು ಹೆಕ್ಟೇರ್ ಡಿ.ಸಿ. ಮನ್ನಾ ಭೂಮಿ ಇದೆ;

ಆ) ಸದರಿ ಸ್ಥಳವನ್ನು ಅರಣ್ಯ ಇಲಾಖೆಯವರು ಒತ್ತುವರಿ ಮಾಡಿ ಗಿಡ ನೆಟ್ಟು ಮರ ಬೆಳೆಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಇ) ಬಂದಿದ್ದಲ್ಲಿ, ತೆರವಿಗೆ ಯಾವ ಕ್ರಮ ವಹಿಸಲಾಗುವುದು;

ಈ) ಡಿ.ಸಿ. ಮನ್ನಾ ಭೂಮಿಯನ್ನು ಪಡೆಯಲು ನೀಡಲಾದ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಒಟ್ಟು 1193.02 ಹೆಕ್ಟೇರ್.

ಆ) ಹೌದು.

ಇ) ಅತಿಕ್ರಮಣ ತೆರವಿಗೆ ಜಿಲ್ಲಾಧಿಕಾರಿಗಳು ಈಗಾಗಲೇ ಸಂಬಂಧಿಸಿದ ವಲಯ ಅರಣ್ಯಾಧಿಕಾರಿಗೆ ನೋಟೀಸು ನೀಡಿರುತ್ತಾರೆ.

ಈ) 27 ಅರ್ಜಿಗಳು.

326 ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಸಕಲೇಶಪುರ ಕ್ಷೇತ್ರದ ಸಕಲೇಶ್ವರ ಮತ್ತು ಆಲೂರು ತಾಲ್ಲೂಕುಗಳಲ್ಲಿ 17 ಹಳ್ಳಿಗಳು ಹೇಮಾವತಿ ಜಲಾಶಯ ಹಿನ್ನೀರಿನಿಂದ ಶೀತಪೀಡಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಇವುಗಳನ್ನು ಸ್ಥಳಾಂತರಿಸಲು ಮತ್ತು ಪುನರ್ವಸತಿ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈ 17 ಗ್ರಾಮಗಳ ಪ್ರಸ್ತಾವನೆಯನ್ನು ಹೇಮಾವತಿ ಮತ್ತು ಯಗಚಿ ಯೋಜನೆಗಳ ಅಡಿಯಲ್ಲಿ ಶೀತಪೀಡಿತವಾಗಿರುವ ಗ್ರಾಮಗಳನ್ನು